# ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
# Karnataka Neeravari Nigam Limited
(A Government of Karnataka Enterprise)


ಸಂಖ್ಯೆ: ಕನೀನಿನಿ/ಅಧಿಕಾರಿ-ಸಿಬ್ಬಂದಿ/2016-17/7473 ದಿನಾಂಕ: 30.12.2016

## ಕಛೇರಿ ಆದೇಶ

ವಿಷಯ: ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಲ್ಲಿರುವ ಕೆಲವು ಯೋಜನೆಗಳನ್ನು ಹಾಗೂ ಸಂಬಂಧಿಸಿದ ಕಛೇರಿ / ಅಧಿಕಾರಿ / ಸಿಬ್ಬಂದಿಯನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿಕ್ಕೆ ವರ್ಗಾಯಿಸಿ ಆದೇಶಿಸಿರುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 35 ವಿಬ್ಯಾಇ 2016 ದಿನಾಂಕ: 20.08.2016.
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 130 ವಿಬ್ಯಾಇ 2016 ದಿನಾಂಕ: 18.11.2016.
3. ದಿನಾಂಕ: 14.12.2016ರಂದು 75ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಯ ನಿರ್ದೇಶನದಂತೆ.
4. ಈ ಕಛೇರಿ ಪತ್ರ ಸಂಖ್ಯೆ: ಕನೀನಿನಿ/ಕೇಕ/ಸಿ-9/342/ಎಎಸ್‌ಟಿ/2016/5938 ದಿನಾಂಕ: 2012.2016.

---------

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಿಂದ (2) ರ ಆದೇಶಗಳಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ, ವಾಣಿವಿಲಾಸ ಸಾಗರ ಯೋಜನೆ ಮತ್ತು ಗಾಯಿತ್ರಿ ಜಲಾಶಯ ಯೋಜನೆ ಹಾಗೂ ಈ ಯೋಜನೆಗಳನ್ನು ನಿರ್ವಹಿಸುತ್ತಿರುವ ಕಛೇರಿಗಳನ್ನು, ಈ ಕಛೇರಿಗೆ ಹೊಂದಿಕೊಂಡಿರುವ ಎಲ್ಲಾ ಹುದ್ದೆಗಳು, ಈ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳನ್ನು ಕೂಡಲೇ ಜಾರಿಗೆ ಬರುವಂತೆ ಯಥಾವತ್ತಾಗಿ (en-block) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ವಿ.ಜೆ.ಎನ್.ಎಲ್.)ದ ಆಡಳಿತ ವ್ಯಾಪ್ತಿಗೆ ಒಳಪಡಿಸಿ, ವರ್ಗಾಯಿಸಲಾಗಿದೆ. ಆಡಳಿತ ಹಾಗೂ ಹಣಕಾಸು ವೆಚ್ಚವನ್ನು ಸಮಂಜಸವಾಗಿ ನಿರ್ವಹಿಸಲು ಅನುಕೂಲವಾಗುವಂತೆ ದಿನಾಂಕ: 01.01.2017ರಿಂದ ಜಾರಿಗೆ ಬರುವಂತೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಆಡಳಿತ ವ್ಯಾಪ್ತಿಗೆ ಒಳಪಡಿಸಲು ಈ ಮೂಲಕ ಆದೇಶಿಸಲಾಗಿದೆ ಹಾಗೂ ದಿನಾಂಕ: 14.12.2016ರಂದು ನಡೆದ ನಿಗಮದ 75ನೇ ಮಂಡಳಿ ಸಭೆಯೂ ಸಹ ಸದರಿ ಪ್ರಸ್ತಾವನೆಗೆ ಸಹಮತಿಸಿ ಅನುಮೋದನೆ ನೀಡಲಾಗಿದೆ.

ಎತ್ತಿನಹೊಳೆ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನಾ ವಲಯಗಳಡಿ ಬರುವ ವೃತ್ತ ಹಾಗೂ ವಿಭಾಗೀಯ/ಉಪ ವಿಭಾಗೀಯ ಕಛೇರಿಗಳು ಈ ಕೆಳಗಿನ ಅಂಶಗಳನ್ನು ಸಂಭಂದಿಸಿದ ಅಧಿಕಾರಿಗಳು ಪಾಲಿಸಲು ಸೂಚಿಸಿದೆ.

| ಕ್ರಸಂ | ವಿಷಯಗಳು | ಕ್ರಮ ಜರುಗಿಸಬೇಕಾದ ಅಧಿಕಾರಿ |
|---|---|---|
| 1 | ಎತ್ತಿನಹೊಳೆ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನಾ ವಲಯಗಳಡಿ ಬರುವ ವೃತ್ತ ಹಾಗೂ ವಿಭಾಗೀಯ/ಉಪ ವಿಭಾಗೀಯ ಕಛೇರಿಗಳ ಆರ್ಥಿಕ ವ್ಯವಹಾರಗಳನ್ನು ದಿನಾಂಕ 31.12.16 ರಂದು ಅಂತಿಮಗೊಳಿಸಲು ಸೂಚಿಸಲಾಗಿದೆ. | CAO (Admin & Accounts), concerned CE's/SE's/EE/AEEs/SLAO's |

| | | |
|---|---|---|
| 2 | ದಿನಾಂಕ 01.01.17 ರಿಂದ ಜಾರಿಗೆ ಬರುವಂತೆ ನಿಗಮದ Establishment & Works ಚಾಲ್ತಿ ಖಾತೆಗಳನ್ನು ಅಂತಿಮಗೊಳಿಸಿ, 31.12.16ರ ವರೆಗೆ ವಿತರಿಸಿರುವ ಚೆಕ್‌ಗಳು ನಗದೀಕೊಂಡಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಬಾಕಿ ಇರುವ ಶಿಲ್ಕುನ್ನು ನೊಂದಾಯಿತ ಕಛೇರಿಯ ಚಾಲ್ತಿ ಬ್ಯಾಂಕ್ ಎಸ್‌ಬಿಎಂ ಖಾತೆ ಸಂಖ್ಯೆ: 54044620658, ಐಎಫ್‌ಎಸ್‌ಸಿ ಕೋಡ್ ಸಂಖ್ಯೆ: SBMY40022, ಡಾ: ಬಿ.ಆರ್ ಅಂಬೇಡ್ಕರ್ ವೀಧಿ ಬ್ರಾಂಚ್, ಬೆಂಗಳೂರು-560001. ಸದರಿ ಬಾಕಿ ಶಿಲ್ಕುನ್ನು ವರ್ಗಾಹಿಸಿರುವ ಕುರಿತು ನೊಂದಾಯಿತ ಕಛೇರಿಗೆ ವಿವರವಾದ ಮಾಹಿತಿಯನ್ನು, ಸಲ್ಲಿಸುವುದು. | CAO Accounts, concerned CE's/SE's/EE's/AEEs/SLAO's |
| 3 | ದಿನಾಂಕ 31.12.16ರ ನಂತರ ಯಾವುದೇ ಆರ್ಥಿಕ ವ್ಯವಹಾರ / ಧನಾದೇಶ (ಚೆಕ್) ಗಳನ್ನು ವಿತರಿಸುವುದನ್ನು ನಿರ್ಬಂಧಿಸಲು ಸಂಬಂಧಿಸಿದ ಬ್ಯಾಂಕ್‌ಗಳಿಗೆ ಸೂಚನೆಯನ್ನು ಈ ಕಛೇರಿಯಿಂದ ನೀಡಲಾಗಿದ್ದು, ಎಲ್ಲಾ ಹಣ ಸೆಳಯುವ ಹಾಗೂ ಬಟವಾಡೆ ಅಧಿಕಾರಿಗಳು ಅದರಂತೆ ತಪ್ಪದೇ ಕ್ರಮ ಜರುಗಿಸಲು ಸೂಚಿಸಿದೆ. ಅಲ್ಲದೆ, ವಿತರಣೆಯಾಗದ (Unused) ಚೆಕ್‌ಗಳನ್ನು ವಿವರಗಳನ್ನು ನಿಗಮದ ರೆಜಿಸ್ಟರನಲ್ಲಿ ನಮೊದಿಸಿಕೊಂಡು ಬ್ಯಾಂಕಿಗೆ ಹಿಂದುರುಗಿಸಿ ಅದಕ್ಕೆ ಬ್ಯಾಂಕಿನಿಂದ ಸ್ವೀಕೃತಿಯನ್ನು ಪಡೆಯುವುದು. | CAO Accounts, concerned CE's/SE's/EE's/AEEs/SLAO's |
| 4 | ಕರ್ನಾಟಕ ನೀರಾವರಿ ನಿಗಮದಲ್ಲಿ ಈ ಹಿಂದೆ ಅಧಿಕಾರಿ / ಸಿಬ್ಬಂದಿಗಳಿಗೆ ದಿನಾಂಕ 31.12.16ರ ಅಂತ್ಯಕ್ಕೆ ನೀಡಲಾದ ಮುಂಗಡದ [ಹಬ್ಬದ / ವೇತನ / ವಾಹನ / ಕಂಪ್ಯೂಟರ್ ಹಾಗೂ ಇತರೆ ಮುಂಗಡದ ಕಟಾವಣೆ] ವಿವರಗಳನ್ನು ಆರ್ಥಿಕ ಶಾಖೆ, ಧಾರವಾಡಗೆ ತಪ್ಪದೇ ಒದಗಿಸಲು ಸೂಚಿಸಿದೆ ಮತ್ತು ಈ ಮೇಲಿನ ಕಟಾವಣೆಗಳಿಗೆ ಸಂಬಂಧಿಸಿದಂತೆ, ಹೊಸ ನಿಗಮದಡಿಯಲ್ಲಿ ಸಂಬಂಧಿಸಿದ ಅಧಿಕಾರಿ / ಸಿಬ್ಬಂದಿಯವರಿಂದ ಕಟಾವಣೆ ಮಾಡಿ ಕರ್ನಾಟಕ ನೀರಾವರಿ ನಿಗಮಕ್ಕೆ ಡಿಡಿ ಮುಖಾಂತರ ನೀಡಿ, ಸದರಿ ಡಿಡಿ ಮೊತ್ತಕ್ಕೆ ಎದುರಾಗಿ ಸಂಪೂರ್ಣ ಮಾಹಿತಿಯನ್ನು (ಯಾವ ಅಧಿಕಾರಿ / ಸಿಬ್ಬಂದಿಯವರಿಂದ) ಕಟಾವಣೆ ಮಾಡಲಾದ ವಿವರಗಳನ್ನು ತಪ್ಪದೇ ಆರ್ಥಿಕ ಶಾಖೆ, ಧಾರವಾಡ ಇಲ್ಲಿಗೆ ಸಲ್ಲಿಸಲು ಸೂಚಿಸಿದೆ. | CAO (Admin & Accounts), concerned CE's/SE's/EE's/AEEs/SLAO's |
| 5 | ಹೊಸ ನಿಗಮಕ್ಕೆ ವರ್ಗಾಯಿಸಲು ಉದ್ದೇಶಿಸಿರುವ ಸಂಬಂಧಪಟ್ಟ ಎಲ್ಲಾ ಕಛೇರಿಗಳು ದಿನಾಂಕ 31.12.16ರ ಅಂತ್ಯದ ಲೆಕ್ಕಪತ್ರಗಳನ್ನು ಹಣಕಾಸು ಶಾಖೆಯಲ್ಲಿ ಡಾಟಾಎಂಟ್ರಿ ಮಾಡಿಸಿ, ಅದನ್ನು ಮುಖ್ಯ ಲೆಕ್ಕಾಧಿಕಾರಿಗಳಿಂದ ಧೃಢೀಕರಣಗೊಳಿಸಲು ಮುಂದಿನ ಕ್ರಮ ಜರುಗಿಸುವುದು. | Concerned CE's/SE's/EE's |
| 6 | ದಿನಾಂಕ 31.12.16ರ ಅಂತ್ಯದವರೆಗೆ ಅನ್ವಯವಾಗುವ ಎಲ್ಲಾ ತೆರಿಗೆಯನ್ನು (ಆದಾಯ ತೆರಿಗೆ, ಸೇವಾ ತೆರಿಗೆ, ವ್ಯಾಟ್ ಒಳಗೊಂಡಂತೆ) ಭರಣ ಮಾಡಿ ಮತ್ತು ರಿಟನ್ಸ್‌ನ್ನು ದಾಖಲಿಸಿ ಅದರ ವಿವರಗಳನ್ನು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು ಮತ್ತು ಆದಾಯ ತೆರಿಗೆ, TAN No, ಸೇವಾ ತೆರಿಗೆ ನೊಂದಣಿಗಳನ್ನು ಸಂಬಂಧಿಸಿದ ಇಲಾಖೆಗೆ ಆರ್ಧ್ಯಾಪಣೆ ಮಾಡಲು ಕ್ರಮ ಜರುಗಿಸಿ, ಆರ್ಧ್ಯಾಪಣೆ ಮಾಡಿ ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು. | CAO Accounts, concerned CE's/SE's/EE's |

| | | |
|---|---|---|
| 7 | ದಿನಾಂಕ: 01.01.17ರಿಂದ ಯಾವುದೇ ಆಡಳಿತಾತ್ಮಕ Establishment, Imprest, Works ಇನ್ನಿತರೆ ಬಿಲ್ಲು / ವೆಚ್ಚಗಳನ್ನು ಕನೀನಿನಿಯಿಂದ ಭರಿಸಲು ಅವಕಾಶವಿರುವುದಿಲ್ಲ. ಸದರಿ ಬಿಲ್ಲುಗಳನ್ನು ಹೊಸ ನಿಗಮಕ್ಕೆ ವರ್ಗಾಯಿಸಲು ಕ್ರಮ ಜರುಗಿಸುವುದು. | CAO Accounts, concerned CE's/SE's/EE's |
| 8 | ಎತ್ತಿನಹೊಳೆ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ, ಗಾಯತ್ರಿ ಯೋಜನೆ ಮತ್ತು ವಿ.ವಿ. ಸಾಗರ ಸಂಭಂದಿಸಿದ ವಲಯಗಳಡಿ ಬರುವ ವೃತ್ತ ಹಾಗೂ ವಿಭಾಗೀಯ/ಉಪ ವಿಭಾಗೀಯ ಕಛೇರಿಗಳಿಗೆ ಸಂಭಂದಿಸಿದ EMD/FSD, IBS, Bank Guarantees, all others registers maintained in KNNL ಗಳನ್ನು ಅಪ್‌ಡೇಟ್ ಮಾಡಿ ಹೊಸ ನಿಗಮಕ್ಕೆ ವರ್ಗಾಯಿಸಲು ಕ್ರಮ ಜರುಗಿಸುವುದು. | CAO Accounts, concerned CE's/SE's/EE's |
| 9 | ದಿ: 01.01.17 ರಿಂದ ಜಾರಿಗೆ ಬರುವಂತೆ ಎತ್ತಿನಹೊಳೆ, ಭದ್ರಾ ಮೇಲ್ದಂಡೆ, ಗಾಯತ್ರಿ, ಮತ್ತು ವಿ.ವಿ. ಸಾಗರ ಯೋಜನೆಗಳಿಗೆ ಸಂಭಂದಿಸಿದ ಕಾಮಗಾರಿ ಬಿಲ್ಲುಗಳನ್ನು ಸ್ವೀಕರಿಸದಿರಲು ಸೂಚಿಸಿದೆ ಹಾಗೂ ನಂತರದ ಬಿಲ್ಲುಗಳನ್ನು ಹೊಸ ನಿಗಮದ ಕೇಂದ್ರ ಕಛೇರಿಗೆ ವರ್ಗಾಯಿಸಲು ಸೂಚಿಸಿದೆ. | CAO Accounts Dharwad |
| 11 | ನಿಗಮಕ್ಕೆ ಬರಬೇಕಾದ ಆದಾಯಗಳನ್ನು ದಿನಾಂಕ: 31.12.16ರವರೆಗೆ ಲೆಕ್ಕ ಹಾಕಿ ಆ ಎಲ್ಲಾ ಆದಾಯಗಳನ್ನು ಕನೀನಿನಿ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುವುದು ಮತ್ತು 01.01.17 ರಿಂದ ಅನ್ವಯವಾಗುವ ಆದಾಯಗಳನ್ನು ಹೊಸ ನಿಗಮದ ಖಾತೆಗಳಿಗೆ ಜಮೆ ಮಾಡುವುದು. | Concerned CE's/SE's/EE's |
| 12 | Establishment, Works ಮತ್ತು ವೈಯಕ್ತಿಕ ಕಡತದ ದಾಖಲೆಗಳನ್ನು ಹೊಸ ನಿಗಮಕ್ಕೆ ವರ್ಗಾಹಿಸಲು ಕ್ರಮ ಜರುಗಿಸುವುದು. | CAO Admin/Accounts Dharwad |

ಸದರಿ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾಗಿದಲ್ಲಿ ಶ್ರೀ ಅಜಿತಕುಮಾರ. ಎಸ್. ಹೆಗ್ಡೆ. ಮುಖ್ಯ ಲೆಕ್ಕಾಧಿಕಾರಿಗಳು ಧಾರವಾಡ್, ಶ್ರೀ. ರಾಜಶೇಖರ್ ಲಗ್ಗೇಟ್ಟಿ (9986667647)/ಶ್ರೀ ಮಧುಕರ್ (9483948208) ಇವರನ್ನು ಸಂಪರ್ಕಿಸಲು ಸೂಚಿಸಿದೆ.

ಈ ಮೇಲ್ಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ.

(ಆರ್. ರುದ್ರಯ್ಯ)
**ವ್ಯವಸ್ಥಾಪಕ ನಿರ್ದೇಶಕರು**
**ಕರ್ನಾಟಕ ನೀರಾವರಿ ನಿಗಮ ನಿಯಮಿತ**

**ಪ್ರತಿಯನ್ನು:**

1. ವಿಶೇಷಾಧಿಕಾರಿಗಳು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
2. ಮುಖ್ಯ ಆಡಳಿತಾಧಿಕಾರಿಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಗಳು, ಕನೀನಿ, ಕೇಂದ್ರ ಕಛೇರಿ ಧಾರವಾಡ.

3. ಮುಖ್ಯ ಆಡಳಿತಾಧಿಕಾರಿಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಗಳು, ವಿ.ಜೆ.ಎನ್.ಎಲ್, ಕೇಂದ್ರ ಕಛೇರಿ ಚಿತ್ರದುರ್ಗ.
4. ಮುಖ್ಯ ಇಂಜನಿಯರ, ವಿ.ಜೆ.ಎನ್.ಎಲ್, ಭದ್ರಾ ಮೇಲ್ದಂಡೆ ಯೋಜನೆ, ಚಿತ್ರದುರ್ಗ.
5. ಮುಖ್ಯ ಇಂಜನಿಯರ, ವಿ.ಜೆ.ಎನ್.ಎಲ್, ಎತ್ತಿನಹೂಳೆ ಯೋಜನೆ, ತುಮಕೂರು
6. ಕಂಪನಿ ಕಾರ್ಯದರ್ಶಿಗಳು ಕನೀನಿ, ಬೆಂಗಳೂರು
7. ಪ್ರಧಾನ ವ್ಯವಸ್ಥಾಪಕರು-ಹಣಕಾಸು, ಕನೀನಿ, ಬೆಂಗಳೂರು
8. ಕಂಪನಿ ಕಾರ್ಯದರ್ಶಿಗಳು ವಿ.ಜೆ.ಎನ್.ಎಲ್, ಬೆಂಗಳೂರು
9. ಸಂಭಂದಿಸಿದ ಎಲ್ಲಾ ವಿ.ಜೆ.ಎನ್.ಎಲ್, ಕಛೇರಿಗಳು
10. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿಗಳು. ಕನೀನಿ ಮತ್ತು ವಿ.ಜೆ.ಎನ್.ಎಲ್, ಬೆಂಗಳೂರು